# ಜನಪದ ಕಥೆಗಳಲ್ಲಿ ಮಹಿಳಾಲೋಕ

**ರಾಮಕೃಷ್ಣಯ್ಯ ಎಂ.**

ಸಹಾಯಕ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಕನ್ನಡ ಸ್ನಾತಕೋತ್ತರ ಮತ್ತು ಸಂಶೋಧನಾ ಕೇಂದ್ರ, ಎಂ. ಇ. ಎಸ್ ಪದವಿ ಕಾಲೇಜು, ಮಲ್ಲೇಶ್ವರಂ, ಬೆಂಗಳೂರು.

**Received: 14-03-2024 ; Acepted: 10-05-2024 ; Published: 08-06-2024**

**DOI: https://doi.org/10.5281/zenodo.11525737**

## ABSTRACT:

ಜನಪದ ಕಥೆಗಳಲ್ಲಿ ಮಹಿಳಾ ಲೋಕ ತಲೆಮಾರಿನಿಂದ ತಲೆಮಾರಿಗೆ ಮೌಖಿಕವಾಗಿ ಹರಿದು ಬಂದಿರುವ ಕಥೆಯನ್ನು ನಮ್ಮಲ್ಲಿ 'ಅಜ್ಜಿಯ ಕಥೆ', 'ಅಡುಗೋಲಜ್ಜಿಯ' ಕಥೆಯಂತಲೂ ಕರೆಯುವುದುಂಟು. ಕಥೆಗಳನ್ನು ಮುಂದಿನ ತಲೆಮಾರಿಗೆ ತಲುಪಿಸುವಲ್ಲಿ ಪ್ರಧಾನ ಪಾತ್ರ ಅಜ್ಜಿಯರದೇ ಆಗಿರುತ್ತದೆ. ವಾಚಕ ಪರಂಪರೆಯ ಈ ಕಥೆಗಳು ಹರಿದು ಬರುವಾಗ ಸಾಹಿತ್ಯ ಪರಂಪರೆಗೆ ಹೋಗಿರುವ ಸಾಧ್ಯತೆಗಳನ್ನು ಅಲ್ಲಗಳೆಯಲಾಗದು. ಕಥೆಗಳು ತಮ್ಮ ವಸ್ತುವಿನಲ್ಲಿ ಸ್ಥಳದಿಂದ ಸ್ಥಳಕ್ಕೆ ವ್ಯತ್ಯಾಸಗೊಳ್ಳಬಹುದು. ಆದರೆ ಒಂದೇ ಬಗೆಯ ಸಾಮಾಜಿಕ ಮತ್ತು ವೈಯಕ್ತಿಕ ಅಗತ್ಯಗಳು ಎಲ್ಲಾ ಕಡೆ ಇದ್ದೇ ಇರುತ್ತವೆ. ಪುರುಷ ಪ್ರಧಾನ ವ್ಯವಸ್ಥೆಯಲ್ಲಿಯೂ ಹೆಣ್ಣು ಕೀಳು, ಅವಲಂಬಿತಳು, ಪುರುಷನಿಲ್ಲದೆ ಅವಳ ಜೀವನ ನಿರರ್ಥಕ ಎಂದೆಲ್ಲಾ ಭಾವಿಸಲಾಗಿತ್ತು. ಈ ಹಿನ್ನೆಲೆಯಲ್ಲಿ ಹುಟ್ಟಿಕೊಂಡ ಜನಪದ ಕಥೆಗಳಲ್ಲಿ ಸ್ತ್ರೀಯರ ಬದುಕು ಬವಣೆಗಳು ಹೇಗಿದ್ದಿರಬಹುದೆಂಬ ಸಂಗತಿಗಳನ್ನು ಸೂಕ್ಷ್ಮವಾಗಿ ಅವಲೋಕಿಸುವ ಒಂದು ಪ್ರಯತ್ನವೇ ಈ ಲೇಖನದ ಉದ್ದೇಶವಾಗಿದೆ. ಕಥೆಗಳನ್ನು ಎಲ್ಲಾ ತಲೆಮಾರುಗಳಲ್ಲಿಯೂ ಹೇಳುತ್ತಿದ್ದರು. ಚಳಿಗಾಲ ಹಾಗೂ ಬೇಸಿಗೆ ಕಾಲಗಳಲ್ಲಿ ಶ್ರಮವನ್ನು ಮರೆಯಲು, ಮಕ್ಕಳನ್ನು ಮಲಗಿಸುವ ವೇಳೆಯಲ್ಲಿ ಕಥೆಗಳನ್ನು ಹೇಳುತ್ತಿದ್ದರು. ಜನಪದ ಕಥೆಗಳಲ್ಲಿ ಅತಿಮಾನುಷ ಪತ್ನಿಯರಾಗಿ ಬರುವ ಸ್ತ್ರೀಯರು, ದೇವತ ಸ್ತ್ರೀಯರು ನಮ್ಮ ಸಾಮಾನ್ಯ ಮಹಿಳೆಯರಿಗಿಂತ ಸಬಲರಾಗಿ, ಸ್ವತಂತ್ರರೂ ಆಗಿ ಕಾಣಿಸುತ್ತಾರೆ. ಹಣೆಬರಹ ಬರೆಯುವ ವಿಧಿಯಮ್ಮ ಅತ್ಯಂತ ಶಕ್ತಿ ದೇವತೆಯಾದರೆ, ಕಥೆಗಳಲ್ಲಿ ಬರುವ ದೇವಕನ್ನಿಕೆಯರು ಭೂಲೋಕದ ಪುರುಷರ ಮೇಲೆ ನಿಯಂತ್ರಣ ವಿರುವವರು. ಇವರಿಗೆ ಮೆಚ್ಚುಗೆಯಾದ ಗಂಡು ಸಿಕ್ಕಿದರೆ ಭೂಮಿಯ ಮೇಲೆ ಬಂದು ಸಂಸಾರ ಮಾಡವಷ್ಟು ಸ್ವತಂತ್ರರು. ಇದಕ್ಕೆ ಉದಾಹರಣೆಯಾಗಿ ಕೆಲವು ಕನ್ನಡದ ಜನಪದ ಕಥಾಸಂಕಲನಗಳಲ್ಲಿ ಗಮನಿಸಬಹುದಾಗಿದೆ. ಜನಪದರು ಅಕ್ಷರಸ್ಥರಲ್ಲದಿದ್ದರೂ, ನೀತಿವಂತರು, ಯಾರಿಗೂ ತೊಂದರೆ ಕೊಡಬಾರದು, ಅದು ನಮಗೆ ತಿರುಗು ಬಾಣವಾಗುವುದೆಂಬ ತತ್ವವನ್ನು ಕತೆಗಳ ಮೂಲಕ ಅನಾವರಣ

ಮಾಡಿದ್ದಾರೆ. ಎಲ್ಲಾ ಕಥೆಗಳಲ್ಲಿ ಕಂಡು ಬರುವ ಮಹತ್ವದ ಆಶಯಗಳೆಂದರೆ ನೀತಿ ಮತ್ತು ಸಮಾಜಮುಖಿ ಚಿಂತನೆ. ಈ ಕಥೆಗಳನ್ನು ಕೇಳಿದವರು ಬದುಕಿನಲ್ಲಿ ಹೇಗೆ ನಡೆದುಕೊಳ್ಳಬೇಕೆಂಬ ನೀತಿ ಒಂದು ತತ್ವವಾಗಿಯೇ ಬರುತ್ತದೆ.

**KEYWORDS:**
ಕನ್ನಡ ಜನಪದ ಕಥೆಗಳು, ಸ್ತ್ರೀ ಪಾತ್ರಗಳು, ಸಮಾಜಮುಖಿ ಚಿಂತನೆ, ಅತಿಮಾನುಷ ಪತ್ನಿಯರು, ಗಂಡು-ಹೆಣ್ಣುಗಳ ಸಾಂಸಾರಿಕ ಬದುಕು.

ಜನಪದ ಸಾಹಿತ್ಯದ ಬಹುಮುಖ್ಯ ಪ್ರಕಾರಗಳಲ್ಲಿ ಒಂದಾದ ಕಥಾ ಪ್ರಕಾರವು ಬಹಳ ಪರಿಣಾಮಕಾರಿಯಾದುದೆಂದೇ ಹೇಳಬಹುದು. ಈ ಪ್ರಕಾರವನ್ನು ಹಲವು ನಿಟ್ಟಿನಿಂದ ಅಧ್ಯಯನ ಮಾಡುವ ಹೊಸ ಶಕೆ ಈಚಿನ ವರ್ಷಗಳಿಂದ ಆರಂಭಗೊಂಡಿದೆ. ಕಥೆ ಗದ್ಯಾತ್ಮಕವಾಗಿರುವುದರಿಂದ ಅದರ ವ್ಯಾಪ್ತಿ ಮಿಕ್ಕ ಪ್ರಕಾರಗಳಿಗಿಂತ ವಿಸ್ತಾರವಾದುದು. ಕಥೆ ಹೇಳುವ ಕ್ರಿಯೆಯಲ್ಲಿ ಹೆಣ್ಣು ಗಂಡು ಇಬ್ಬರೂ ಪಾಲ್ಗೊಳ್ಳುವುದರಿಂದ ಸ್ತ್ರೀಯರ ಬದುಕಿನ ವಿಧಾನವನ್ನು ಅರ್ಥ ಮಾಡಿಕೊಳ್ಳಲು ವಿಪುಲವಾದ ಮಾಹಿತಿಯನ್ನು ನೀಡಬಲ್ಲದು.

ಕನ್ನಡ ಜನಪದ ಕಥೆಗಳಲ್ಲಿ ಚಿತ್ರಿತವಾಗಿರುವ ಸ್ತ್ರೀಯು ಶಿಷ್ಟ ಸಾಹಿತ್ಯದಲ್ಲಿ ಕಂಡು ಬರುವ ಹೆಣ್ಣಿಗಿಂತ ತೀರಾ ಭಿನ್ನವಾಗಿಲ್ಲವೆಂದೇ ಹೇಳಬಹುದು. ಇಲ್ಲಿನ ಸ್ತ್ರೀಗೂ ಪತಿಯೇ ಪ್ರತ್ಯಕ್ಷ ದೈವ, ಸಂತಾನ ಭಾಗ್ಯವೇ ಅಂತಿಮ ಗುರಿ ಮತ್ತು ಪಂಚಪ್ರಾಣ. ಇದರ ಜೊತೆಗೆ ಕಥೆಯಲ್ಲಿ ಬರುವ ನಾರಿ ತನ್ನ ಪತಿವ್ರತಾ ಧರ್ಮ ಪಾಲನೆಗೆ ಪ್ರಾಣವನ್ನೇ ಪಣಕ್ಕಿಡುವುದು ಅತಿಶಯೋಕ್ತಿಯೆನಿಸಲಾರದು.

ಕಥೆಗಳನ್ನು ಹೇಳುವುದಾಗಲಿ ಕೇಳುವುದಾಗಲಿ ನಿನ್ನೆ ಮೊನ್ನೆಯದಲ್ಲ, ಮೊದಲಿನಿಂದಲೂ ಮಾನವ ಕಥೆ ಹೇಳುವುದನ್ನು ಕಲೆಯಾಗಿ ಬೆಳೆಸಿಕೊಂಡ ಈ ಕಾರಣದಿಂದಾಗಿಯೇ ಜನಪದ ಕಥೆಗಳು ತಲೆಮಾರಿನಿಂದ ತಲೆಮಾರಿಗೆ ದಾಟಿ ಬರುವುದು ಸಾಧ್ಯವಾಯಿತು. ಕಥೆ ಹೇಳುವ ಪ್ರಕ್ರಿಯೆಗೆ ವಿಶೇಷ ಸಂದರ್ಭಗಳು ಇರುತ್ತಿದ್ದವು. ಕೆಲವನ್ನು ಚಳಿಗಾಲದಲ್ಲೂ, ಕೆಲವನ್ನು ಬೇಸಿಗೆಯಲ್ಲೂ ಹೇಳುತ್ತಿದ್ದರು. ಕೆಲಸದ ಸಮಯದಲ್ಲಿ ಕೆಲಸದ ಶ್ರಮವನ್ನು ಮರೆಯಲು ಕಥೆಗಳನ್ನು ಹೇಳುತ್ತಿದ್ದರು. ಮಕ್ಕಳನ್ನು ಮಲಗಿಸಲು ಕಥೆ

ದೊಡ್ಡ ಸಾಧನವಾಗಿ ಬಳಕೆಯಾಯಿತು, ರಾಜರು ಕಥೆ ಹೇಳುವವರನ್ನು ನೇಮಿಸಿಕೊಂಡಿದ್ದರ ಉಲ್ಲೇಖಗಳಿವೆ. ಹಳ್ಳಿಯ ಕಡೆಗಳಲ್ಲಿ ಇವತ್ತಿಗೂ ಊಟ ಮುಗಿದ ಮೇಲೆ ಬೆಳದಿಂಗಳಿನಲ್ಲಿ ಕಥೆ ಹೇಳುವವರನ್ನೂ ಅವರ ಸುತ್ತ ಕುಳಿತು ಕೇಳುವವರನ್ನು ನೋಡುತ್ತೇವೆ. ಈ ಕಥೆಗಳನ್ನು ಹೇಳಲು ಹಾಗು ಕೇಳಲು ಗಂಡಸರು, ಹೆಂಗಸರು, ಮಕ್ಕಳೂ ಯಾರಾದರೂ ಆಗಿರಬಹುದು. ಅದು ಯಾವುದೇ ಪ್ರದೇಶ, ನಾಗರಿಕತೆಗೆ ಸೀಮಿತವಾದುದಲ್ಲ.

ಜನಪದ ಕಥೆಗಳಲ್ಲಿ ಮನುಷ್ಯ ಪಾತ್ರ ವಹಿಸುವುದಲ್ಲದೆ, ದೇವತೆ, ಪ್ರಾಣಿ, ದೇವ್ವ , ಬೇತಾಳ, ರಾಕ್ಷಸ ಮೊದಲಾದ ಮನುಷ್ಯೇತರರೂ ನಿರ್ಜೀವ ವಸ್ತು, ಮರಗಿಡಗಳೂ ಪಾತ್ರ ವಹಿಸುವುದುಂಟು. ಸ್ವರ್ಗ, ಮರ್ತ್ಯ, ನರಕ ಈ ಮೂರು ಲೋಕಗಳಿಗೂ ಪಾತ್ರಗಳು ಸಂಬಂಧಿಸಿರುತ್ತವೆ. ಸಾಮಾನ್ಯವಾಗಿ, ಪಾತ್ರಗಳ ಸಂಖ್ಯೆ ಕಡಿಮೆ ಎಂದೇ ಹೇಳಬೇಕು. ಪಾತ್ರಗಳನ್ನು ನಾಯಕ ನಾಯಕಿಯರು, ಸಹಾಯಕರು ಮತ್ತು ಪ್ರತಿನಾಯಕರು ಎಂಬುದಾಗಿ ಮೂರು ವಿಭಾಗ ಮಾಡಿಕೊಳ್ಳಬಹುದು. ಇವರೆಲ್ಲರಿಗೂ ಸಾಹಸವೇ ಮೂಲವಾಗಿರುವುದರಿಂದ ಸಮಸ್ಯೆ ತಾನಾಗಿ ಗೋಚರಿಸುತ್ತದೆ. ನಾಯಕ ಸಾಮಾನ್ಯವಾಗಿ ಅನ್ವೇಷಕನಾಗಿ ಕಾಣಿಸಿಕೊಳ್ಳುತ್ತಾನೆ. ಇವನಲ್ಲಿ ಉತ್ತಮ ಗುಣಗಳ ಸಮಾವೇಶವೇ ಆಗಿರುತ್ತದೆ. ನಾಯಕಿ ಧೈರ್ಯವೊಂದನ್ನು ಬಿಟ್ಟರೆ, ನಾಯಕನ ಉಳಿದೆಲ್ಲ ಗುಣಗಳನ್ನು ಹೊಂದಿರುತ್ತಾಳೆ. ನಾಯಕ ನಿಷ್ಕ್ರಿಯನಾದಾಗ ಅತಿಮಾನುಷ ಸಹಾಯಕರೇ ನಾಯಕನ ಕೆಲಸವನ್ನು ನಿರ್ವಹಿಸುತ್ತಾರೆ.

ಸುಂದರ ಸ್ತ್ರೀಯರು ತಮ್ಮ ಪಾತಿವ್ರತ್ಯ ರಕ್ಷಣೆಗಾಗಿ ಕಷ್ಟ ಪರಂಪರೆಗಳನ್ನು ಎದುರಿಸಬೇಕಾಗುತ್ತಿತ್ತು. ಗಂಡನೊಡನೆ ಸುಂದರ ಹೆಂಡತಿ ಇದ್ದಾಗ ಇಬ್ಬರು ಹಲವು ಸಂಕಟಗಳಲ್ಲಿ ಸಿಲುಕಿರುವುದನ್ನು ಕಾಣಬಹುದು.

ಜನಪದ ಕಥೆಗಳಲ್ಲಿ ಕಂಡುಬರುವ ಬಹುತೇಕ ಸ್ತ್ರೀಯರು ಶ್ರಮ ಜೀವಿಗಳು. ಹಿರಿಯರಿಗೆ ವಿಧೇಯರಾಗಿ ನಡೆದುಕೊಳ್ಳುವರು. ತಾವು ಹೆಣ್ಣಾಗಿ ಹುಟ್ಟಿದ ಕಾರಣ ಕಷ್ಟ ಪಡುವುದು ಅನಿವಾರ್ಯವೆಂದು ನಂಬಿದ್ದರು. ಪುರುಷನ ದಬ್ಬಾಳಿಕೆಯನ್ನು ಮೌನವಾಗಿ ಸಹಿಸುವಂತಹ ಸ್ತ್ರೀಯರೇ ಹೆಚ್ಚಾಗಿ ಕಂಡುಬರುತ್ತಾರೆ. ಜನಪದ ಕಥೆಗಳಲ್ಲಿ ಸ್ತ್ರೀಯರು ರಾಣಿಯರಾಗಿ, ರಾಜಕುಮಾರಿಯರಾಗಿ, ಪ್ರಧಾನಿಯ ಮಗಳಾಗಿ, ಹೂವಾಡಗಿತ್ತಿ,

ಮುದುಕಿಯಂತೆ ಇತ್ಯಾದಿ ನಾನಾ ಪಾತ್ರಗಳಲ್ಲಿ ಅಭಿವ್ಯಕ್ತಗೊಂಡಿದ್ದು ಸ್ತ್ರೀಲೋಕದ ಹಲವು ಹತ್ತು ಚಿತ್ರಗಳು ಜನಪದ ಕಥೆಗಳಲ್ಲಿ ಕಂಡುಬರುತ್ತವೆ.

ಜನಪದ ಕಥೆಗಳಲ್ಲಿ ಹೆಣ್ಣು ಮುಖ್ಯ ಭೂಮಿಕೆಯಲ್ಲಿ ಕಾಣಿಸಿಕೊಳ್ಳುವುದು ಪತಿವ್ರತೆಯರ ಕಥೆಗಳಲ್ಲಿ ಹಾಗೂ ವ್ಯಭಿಚಾರದ ಕಥೆಗಳಲ್ಲಿ. ವ್ಯಭಿಚಾರಕ್ಕೆ ಸಂಬಂಧಿಸಿದ ಕಥೆಯ ನಾಯಕಿಯರು ಸಾಮಾನ್ಯವಾಗಿ ರಾಣಿಯರು, ಸಿರಿವಂತರ ಸೊಸೆಯರು ಅಥವಾ ಹೆಂಡತಿಯರು. ಬಹಳಷ್ಟು ರಾಣಿಯರು ಅಪ್ರಮಾಣಿಕ ಮಡದಿಯಾಗಿ ಕಂಡುಬರುವುದು ಸರ್ವೆ ಸಾಮಾನ್ಯ ಸಂಗತಿಯಾಗಿದೆ. ಇದಕ್ಕೆ ಕಾರಣಗಳು ಹಲವು. ಬಹು ಪತ್ನಿತ್ವ , ವಿಷಯಸುಖ, ಸಾವಕಾಶದ ಬದುಕು ಇಂತವುಗಳು ಅನೈತಿಕತೆಗೆ ಅವಕಾಶ ಮಾಡಿ ಕೊಟ್ಟಿರಬಹುದು.

ಕನ್ನಡ ಜನಪದ ಕಥೆಗಳು ಎಂಬ ಸಂಕಲನದಲ್ಲಿನ “ದೇವಗನ್ನೆ” ಕಥೆಯಲ್ಲಿ ಒಬ್ಬ ರಾಜನಿಗೆ ಏಳು ಜನ ಗಂಡು ಮಕ್ಕಳು. ರಾಜನು ತನ್ನ ಆರು ಜನ ಮಕ್ಕಳನ್ನು ಒಂದೊಂದು ದೇಶಕ್ಕೆ ರಾಜನನ್ನಾಗಿ ನೇಮಿಸಿ ಕೊನೆಯವನನ್ನು ತನ್ನ ಬಳಿ ಇರಿಸಿಕೊಂಡಿದ್ದ. ಆ ಕಿರಿಯವನು “ಅಣ್ಣಂದಿರೆಲ್ಲಾ ಎಲ್ಲಿ?” ನನಗೆ ಬುದ್ಧಿ ಹೇಳದೆ ಕುದುರೆ ಹತ್ತಿಕೊಂಡು ಹೋಗಿದ್ದಾರೆ ಹೇಳು ಎಂದು ತಾಯಿಯನ್ನು ಒತ್ತಾಯ ಮಾಡುತ್ತಾನೆ. ಕೊನೆಗೆ ಹುಡುಕಿ ತರಲು ಆತನೇ ಹೋಗುತ್ತಾನೆ. ಅಣ್ಣಂದಿರು ಆ ಕಡೆಯಿಂದ ಎದುರಿಗೆ ಬರುತ್ತಿದ್ದರು. ಮುಂದೆ ಒಂದು ಕಾಳಿಕಾ ದೇವಸ್ಥಾನ ಅಲ್ಲಿ ಏಳು ಜನ ದೇವಕನ್ನಿಕೆಯರು ಕಾಳಿಕಾದೇವಿಯನ್ನು ಪೂಜಿಸಿಕೊಂಡು ಏಳು ಅರಮನೆಗಳಲ್ಲಿ ವಾಸ ಮಾಡುತ್ತಿದ್ದರು. ಅಲ್ಲಿಗೆ ಯಾರೇ ಬಂದರೂ 3 ತಿಂಗಳು ಇರಿಸಿಕೊಂಡು ನಂತರ ದೇವಿಗೆ ಆಹುತಿ ಕೊಡುತ್ತಿದ್ದರು. ಕೊನೆಗೆ ದೇವ ಕನ್ನಿಕೆಯಿಂದ 6 ಜನ ಅಣ್ಣಂದಿರು ಬಿಡುಗಡೆಯಾದರು. ಕೊನೆಯವನು ಸಿಕ್ಕಿಕೊಳ್ಳುತ್ತಾನೆ 7 ಜನ ದೇವಗನ್ನಿಕೆಯರು ಅವನ ತಲೆಯನ್ನು ಕತ್ತರಿಸುತ್ತಾರೆ. ಅವನ ಮಾಂಸವನ್ನು ಗಿಡ ಗಿಡಕ್ಕೆ ಹಂಚುತ್ತಾರೆ. ಕೊನೆಯ ದೇವಗನ್ನಿಕೆ ಅವನ್ನೆಲ್ಲಾ ಆಯ್ದುಕೊಂಡು ಮಡಲಿಗಿಟ್ಟುಕೊಳುತ್ತಾಳೆ. ರಾತ್ರಿ ಹನ್ನೆರಡು ಗಂಟೆಗೆ ಪಾರ್ವತಿ ಪರಮೇಶ್ವರರು ಸಂಚಾರಕ್ಕೆ ಹೋಗುವಾಗ ದೇವಗನ್ನಿಕೆಯನ್ನು ವಿಚಾರಿಸುತ್ತಾರೆ. ಆಕೆ ನಡೆದೆಲ್ಲಾ ವಿವರಿಸುತ್ತಾಳೆ. ಕೊನೆಯ ರಾಜಕುಮಾರ ಬದುಕುಳಿದು ತನ್ನ ರಾಜ್ಯಕ್ಕೆ ಹೊರಡುತ್ತಾನೆ. ಅವಳನನ್ನು ಕಳುಹಿಸಲು ದೇವೇಂದ್ರ ಒಪ್ಪುವುದಿಲ್ಲ.

ಕೊನೆಯ ರಾಜಕುಮಾರ ಅರ್ಧ ದಾರಿಯಲ್ಲಿ ನೆನಪಿಸಿಕೊಳ್ಳುತ್ತಾನೆ. ಅಲ್ಲಿ ಅವಳು ಕಾಣಿಸಿಕೊಳ್ಳುತ್ತಾಳೆ. ಕೊನೆಗೆ ಆಕೆ ರಾಜಕುಮಾರನ ಕೈ ಹಿಡಿಯುತ್ತಾಳೆ.

ಈ ಮೇಲಿನ ಕಥೆಯಲ್ಲಿ ಹೆಣ್ಣು ದೇವಗನ್ನಿಕೆಯಾದರೂ ರಾಜಕುಮಾರನನ್ನು ಲಗ್ನವಾಗಿ ಭೂಮಿಮೇಲೆ ವಾಸಿಸುವ ಹೆಣ್ಣಾಗುತ್ತಾಳೆ.

ಮತ್ತೊಂದು ಕಥೆ 'ಕುಂಟನ ಉಪಾಯ' ಎಂಬುದರಲ್ಲಿ ಒಂದೂರಲ್ಲಿ ಒಬ್ಬ ರೈತನಿರುತ್ತಾನೆ. ಅವನಿಗೆ ಏಳು ಜನ ಗಂಡು ಮಕ್ಕಳು ಒಬ್ಬ ಮಗಳಿರುತ್ತಾಳೆ. ಕೊನೆಯ ಮಗ ಕುಂಟ. ಒಂದು ಸಲ ಎಲ್ಲರೂ ಹೊಲದಲ್ಲಿ ಕೆಲಸ ಮಾಡುತ್ತಿರಲು ತಂಗಿಯು ಊಟವನ್ನು ತೆಗೆದುಕೊಂಡು ಹೋಗುತ್ತಾಳೆ. ದಾರಿಯಲ್ಲಿ ಒಬ್ಬ ರಾಕ್ಷಸ ಎದುರಾಗಿ ನಿಂತು ಊಟ ಕೇಳುತ್ತಾನೆ. ಆಕೆ ಆ ಕಡೆಯಿಂದ ಬರುವಾಗ ಕೊಡುತ್ತೇನೆಂದು ಹೇಳಿ ಹೋದವಳು ಬರುವಾಗ ಒಂದು ಕಲ್ಲಿಗೆ ಮುದ್ದೆಯನ್ನು ಸವರಿ ಕೊಡುತ್ತಾಳೆ. ರಾಕ್ಷಸನ ಹಲ್ಲುಗಳು ಮುರಿದು ಹೋಗಲು ರಾಕ್ಷಸ ಅವಳನ್ನು ಎತ್ತಿಕೊಂಡು ಗುಹೆಗೆ ಹೋಗುತ್ತಾನೆ. ತಂಗಿಯನ್ನು ಹುಡುಕಿ ತರಲು ಎಲ್ಲರೂ ಕುಂಟನ ಜೊತೆಯಲ್ಲಿ ಹೊರಡುತ್ತಾರೆ. ದಾರಿಯಲ್ಲಿ ಸಿಕ್ಕಿದ ಕಟ್ಟಿರುವೆ, ಕತ್ತೆ, ಬಾನಿ ಮತ್ತು ಗುಂಡುಕಲ್ಲುಗಳನ್ನು ಇಟ್ಟುಕೊಂಡು ಅಟ್ಟದ ಮೇಲೆ ಕೂರುತ್ತಾರೆ. ಅಣ್ಣಂದಿರೆಲ್ಲ ಅಟ್ಟದ ಮೇಲೆ ಕುಳಿತಿರಲು ರಾಕ್ಷಸನು ಹೊಸಗಮಲ ಎಂದುಕೊಂಡೇ ಒಳಗೆ ಬರುತ್ತಾನೆ. ಕುಂಟ ಉಚ್ಚೆ ಉಯ್ಯುತ್ತಾನೆ, ಅದನ್ನು ರಾಕ್ಷಸ ಕುಡಿಯುತ್ತಾನೆ. ಕಕ್ಕಸ್ಸು ಮಾಡಿಬಿಡುತ್ತಾನೆ. ರಾಕ್ಷಸ ಅದನ್ನು ತಿನ್ನುತ್ತಾನೆ. ಕತ್ತೆಯ ತಿಕಕ್ಕೆ ಕಟ್ಟಿರುವೆಯನ್ನು ಬಿಟ್ಟು ಕಿರುಚುವಂತೆ ಮಾಡಿಬಿಡುತ್ತಾನೆ. ಆ ಕೂಗಿಗೆ ರಾಕ್ಷಸ ಹೆದರಿ ಓಡುತ್ತಾನೆ. ಇವರೆಲ್ಲರೂ ತಂಗಿಯನ್ನು ಗುಹೆಯಿಂದ ಕರೆದುಕೊಂಡು ಹಿಂತಿರುಗುತ್ತಾರೆ. ಈ ಕಥೆಯಲ್ಲಿ 7 ಜನರಿಗೂ ತಂಗಿಯೇ ಮುಖ್ಯವಾಗಿ ಕಂಡು ಬರುತ್ತಾಳೆ.

'ರಾಕ್ಷಸನ ಜೀವ' ಎನ್ನುವ ಕಥೆಯೊಂದರಲ್ಲಿ ಒಬ್ಬ ದೊರೆಗೆ ಏಳು ಜನ ಗಂಡು ಮಕ್ಕಳು. ಆ ಏಳು ಜನರಲ್ಲಿ 6 ಜನರು ತಮಗೆಲ್ಲಾ ಹೆಣ್ಣುಗಳನ್ನು ಹುಡುಕಿಕೊಂಡು ಬಂದು ಮದುವೆಯಾಗಲು ನಿಶ್ಚಯಿಸಿ ಹೊರಗೆ ಹೋಗುತ್ತಾರೆ. ಮುಂದೆ ಒಂದು ಬೆಟ್ಟದ ಹತ್ತಿರ ಇದ್ದ ಒಬ್ಬ ರಾಕ್ಷಸನು ಅವರನ್ನೆಲ್ಲಾ ಕಲ್ಲಾಗಿ ಮಾಡಿ ಬಿಡುತ್ತಾನೆ. ಅಣ್ಣಂದಿರುಗಳು ಹಿಂತಿರುಗಿ ಬರದಿರಲು ಕೊನೆಯವನು ಹುಡುಕಿಕೊಂಡು ಬರಲು ತೋಳದ ಮೇಲೆ

ಕುಳಿತು ಹೋಗುತ್ತಾನೆ. ಅಲ್ಲಿ ಒಂದು ಗುಹೆ ಇರುತ್ತದೆ. ಅದರಲ್ಲಿ ಒಬ್ಬ ರಾಜಕುಮಾರಿ ಇರುತ್ತಾಳೆ. ಕೊನೆಯವನು ಆಕೆಯನ್ನು ರಾಕ್ಷಸನ ಜೀವ ಎಲ್ಲಿದೆಯೆಂದು ಕೇಳಲು ಆಗ ಹುಡುಗಿಯು ರಾಕ್ಷಸನು ಗುಹೆಗೆ ಬಂದ ಮೇಲೆ ಕೇಳಿ ತಿಳಿದುಕೊಂಡು ಹೇಳುತ್ತೇನೆ ಎನ್ನುತ್ತಾಳೆ. ಆ ರಾಕ್ಷಸನ ಜೀವ ಇರುವುದು ಒಂದು ದೊಡ್ಡ ಸಮುದ್ರ, ಅದರ ಮಧ್ಯದೊಳ್ಲೊಂದು ಮನೆ, ಅದರ ಹತ್ತಿರ ಒಂದು ಕೊಳ, ಆ ಕೊಳದಲ್ಲಿ ಒಂದು ಕೊಕ್ಕರೆ, ಅದರ ಹೊಟ್ಟೆಯೊಳಗೆ ಒಂದು ಮೊಟ್ಟೆ, ಅದರಲ್ಲಿದೆ ಜೀವ ಎಂದು ಹೇಳುತ್ತಾಳೆ ಕೊನೆಯ ರಾಜಕುಮಾರ ಮೊಟ್ಟೆಯನ್ನು ನಾಶ ಮಾಡಿ ರಾಕ್ಷಸನನ್ನು ಕೊಂದು ಅಣ್ಣಂದಿರನ್ನು ಬಿಡಿಸಿಕೊಂಡು ಬರುತ್ತಾನೆ. ರಾಜಕುಮಾರಿಯನ್ನು ಕರೆದು ಕೊಂಡುಬಂದು ಮದುವೆಯಾಗುತ್ತಾನೆ.

'ಮಲತಾಯಿ' ಎಂಬ ಈ ಕಥೆಯಲ್ಲಿ ಒಂದು ಊರಲ್ಲಿ ಒಬ್ಬ ದೊರೆ ಅವನಿಗೆ ಇಬ್ಬರು ಹೆಣ್ಣು ಮಕ್ಕಳು ಹೆಂಡತಿ ತೀರಿಕೊಂಡಿರುತ್ತಾಳೆ. ಆ ದೊರೆ ಮತ್ತೆ 2ನೇ ಮದುವೆಯಾಗುತ್ತಾನೆ. ಮಲತಾಯಿ ಹೊಲದ ಹತ್ತಿರಕ್ಕೆ ಆ ಇಬ್ಬರು ಹೆಣ್ಣು ಮಕ್ಕಳನ್ನು ಕಳುಹಿಸುವುದು, ಉಳಿದ ಮುಸುರೆ, ಎಂಜಲು ಊಟವನ್ನು ನೀಡುವುದು ಹೀಗೆ ನಡೆದು ಕೊಳ್ಳುತ್ತಾಳೆ. ಸತ್ತು ಹೋಗಿರುವ ತಾಯಿಗೆ ಇದೆಲ್ಲ ತಿಳಿಯುತ್ತಿರುತ್ತದೆ. ಆಗ ಆ ತಾಯಿ ಹಸುವಿನ ವೇಷದಲ್ಲಿ ಬಂದು ಹಾಲನ್ನು ಕೊಟ್ಟು ಸಾಕುತ್ತಿರಲು ಇದನ್ನು ತಿಳಿದ ಮಲತಾಯಿ ಹಸುವನ್ನು ಕೊಲ್ಲಿಸುತ್ತಾಳೆ. ತಾಯಿ ಸೇಬು ಮರವಾಗಿ ಹುಟ್ಟುತ್ತಾಳೆ. ಅದನ್ನು ಮಲತಾಯಿ ಕತ್ತರಿಸಿ ಹಾಕುತ್ತಾಳೆ. ರಾಜನಿಂದಲೇ ಮಕ್ಕಳನ್ನು ಕಾಡಿಗೆ ಬಿಟ್ಟು ಬರುವಂತೆ ಪ್ರೇರೇಪಿಸುತ್ತಾಳೆ. ಪಕ್ಕದ ರಾಜ್ಯದ ರಾಜ ಹಾಗೂ ಮಂತ್ರಿಯರು ಇವರನ್ನು ವಿವಾಹವಾಗುತ್ತಾರೆ. ತಾಯಿ ನಾಯಿಯಾಗಿ ತನ್ನ ಮಕ್ಕಳ ಮನೆಗೆ ಬರುತ್ತಾಳೆ. ತನ್ನ ಮನೆಗೆ ಬಂದ ನಾಯಿಯನ್ನು ದೊಡ್ಡ ಮಗಳು ಚೆನ್ನಾಗಿ ಉಪಚರಿಸುತ್ತಾಳೆ. ನಂತರ ಆ ತಾಯಿ ಚಿಕ್ಕಮಗಳ ಮನೆಗೆ ಹೋಗುತ್ತಾಳೆ. ಚಿಕ್ಕ ಮಗಳು ಆ ನಾಯಿಯ ಮೇಲೆ ಕುದಿಯುವ ನೀರನ್ನು ಚೆಲ್ಲಿ ಸಾಯಿಸುತ್ತಾಳೆ. ಅಕ್ಕ ತೋರಿದ ಅಕ್ಕರೆಗೆ ಶ್ರೀಮಂತಳಾಗುತ್ತಾಳೆ. ತಂಗಿಯು ಹಾವಿನಿಂದ ಕಚ್ಚಿಸಿಕೊಂಡು ಸಾಯುತ್ತಾಳೆ.

ಈ ಮೇಲಿನ ಕಥೆಯು ನೀತಿಯುಕ್ತವಾಗಿದ್ದು 'ನಾಯಿಯಾದರೂ ತಾಯಿ ತಾಯಿಯೆ'. ಅವಳನ್ನು ನಾವು ಹೇಗೆ ನೋಡಿಕೊಳ್ಳಬೇಕೆಂಬ ಸಂಗತಿಯನ್ನು ತಿಳಿಸಿಕೊಡುತ್ತದೆ. ಮತ್ತೊಂದು ದೃಷ್ಟಿಯಿಂದ

ನೋಡುವುದಾದರೆ ನಮಗಿರಬೇಕಾದ ಪ್ರಾಣಿ ಪ್ರೀತಿಯನ್ನು ಎತ್ತಿ ತೋರುತ್ತದೆ.

'ಒಂದು ಕೂದಲ ಹುಡುಗಿ' ಎಂಬ ಕಥೆಯೊಂದರಲ್ಲಿ ಒಂದು ಊರು ಅಲ್ಲಿ ಇಬ್ಬರು ಅಕ್ಕ ತಂಗಿಯರು ಇರುತ್ತಾರೆ. ಹಿರಿಯವಳಿಗೆ ಎರಡು ಕೂದಲುಗಳಿರುತ್ತದೆ. ಚಿಕ್ಕವಳಿಗೆ ಒಂದು ಕೂದಲು ಇರುತ್ತದೆ. ಚಿಕ್ಕವಳನ್ನು ಮನೆ ಬಿಟ್ಟು ಓಡಿಸುತ್ತಾರೆ. ಆಕೆಯು ಮನೆ ಬಿಟ್ಟು ಹೋಗುವಾಗ ಆ ದಾರಿಯಲ್ಲಿ ಆನೆಯೊಂದು ಎದುರಾಗಿ ನೀರನ್ನು ಕೇಳುತ್ತದೆ. ಆಕೆ ನೀರನ್ನು ತಂದು ಕೊಡುತ್ತಾಳೆ. ಮುಂದೆ ಒಂದು ಗುಲಾಬಿ ಹೂವಿನ ಗಿಡ ಎದುರಾಗುತ್ತದೆ. ಅದು ಸಹಾ ತನಗೆ ನೀರು ಬೇಕೆಂದು ಕೇಳುತ್ತದೆ. ನೀರು ತಂದು ಹಾಕುತ್ತಾಳೆ. ಹಾಗೆ ಹೋಗುತ್ತಿರಲು ಮುಂದೆ ಒಂದು ಇರುವೆ ಸಿಗುತ್ತದೆ. ಅದು ಸಕ್ಕರೆಯನ್ನು ಕೇಳುತ್ತೆ. ಆಕೆಯು ಸಕ್ಕರೆ ತಂದು ಇಡುತ್ತಾಳೆ. ಒಂದು ಹಸು ಎದುರಾಗಿ ಹುಲ್ಲು ಕೇಳುತ್ತದೆ. ಆಕೆ ಹುಲ್ಲನ್ನು ತಂದು ಹಾಕುತ್ತಾಳೆ. ಬಹಳಷ್ಟು ದೂರ ಹೋದ ಮೇಲೆ ಮುಂದೆ ಒಬ್ಬ ಅಜ್ಜಿಯು ಎದುರಾಗುತ್ತಾಳೆ. ಆ ಅಜ್ಜಿಯು ಈ ಹುಡುಗಿಯ ಎಲ್ಲಾ ವಿಚಾರಗಳನ್ನು ತಿಳಿದುಕೊಂಡು ಅವಳ ತಲೆ ತುಂಬಾ ಕೂದಲು ಬರುವ ಉಪಾಯವನ್ನು ಹೇಳಿಕೊಡುತ್ತಾಳೆ. ಆಕೆಗೆ ತಲೆ ತುಂಬಾ ಕೂದಲು ಬಂದು ಊರಿಗೆ ಹಿಂತಿರುಗುತ್ತಾಳೆ. ಆಕೆ ಅಜ್ಜಿ ಮನೆಯಿಂದ ಊರಿಗೆ ಬರುವಾಗ ಹಸು ಹಾಲು ಕೊಡುತ್ತದೆ. ಇರುವೆ ಮೂಟೆಗಟ್ಟಲೆ ಸಕ್ಕರೆ ಕೊಡುತ್ತದೆ, ಗುಲಾಬಿ ಗಿಡ ತಲೆ ತುಂಬಾ ಹೂ ಮುಡಿಸುತ್ತೆ. ಆನೆಯು ಅವಳನ್ನು ಹೊತ್ತುಕೊಂಡು ಊರಿಗೆ ತಂದು ಬಿಡುತ್ತೆ. ಮುಂದೆ ಅಕ್ಕ 2 ಕೊದಲುಗಳ ಹುಡುಗಿಯನ್ನು ಮನೆಯಿಂದ ಹೊರಕ್ಕೆ ಅಟ್ಟುತ್ತಾರೆ. ಆಕೆ ಹೋಗುವಾಗ ತಂಗಿಗೆ ಎದುರಾದ ಪ್ರಾಣಿಗಳು ಇರುವೆ, ಗುಲಾಬಿ ಹಾಗೂ ಅಜ್ಜಿಯು ಎದುರಾಗುತ್ತಾರೆ. ಆದರೆ ಈಕೆಯು ಒಳ್ಳೆಯವಳಲ್ಲದ ಕಾರಣ ಶಿಕ್ಷೆಗೆ ಒಳಗಾಗುತ್ತಾಳೆ.

ಈ ಕಥೆಯು ಅತ್ಯಂತ ಮಾರ್ಮಿಕವಾಗಿರುವುದರ ಜೊತೆಗೆ ಹೆಣ್ಣೊಬ್ಬಳ ನಡೆನುಡಿ ಹೇಗಿರಬೇಕು? ಪ್ರಾಣಿ, ಗಿಡ, ಮರ, ಮನುಷ್ಯ ಸಂಬಂಧಗಳ ಮಹತ್ವವನ್ನು ಸಾರುತ್ತದೆ. ನಾವು ಪ್ರೀತಿ ತೋರಿದರೆ ನಮಗೂ ಪ್ರೀತಿ ದೊರೆಯುತ್ತದೆ. ನಮಗೆ ತೊಂದರೆಯನ್ನು ಯಾವ ಪ್ರಾಣಿಯಾಗಲಿ ಮನುಷ್ಯರಾಗಲಿ ಸುಮ್ಮನೆ ಕೊಡುವುದಿಲ್ಲ. ಇದರ ಬಗೆಗೆ ಅರಿವಿರಬೇಕೆಂಬ ಸಂಗತಿಯನ್ನು ಸ್ಪಷ್ಟೀಕರಿಸುತ್ತದೆ.

'ಮಳೆರಾಯನ ಮಡದಿ ' ಎಂಬ ಕಥೆಯಲ್ಲಿ ಬೆಳ್ಳಿ ಪುರವೆಂಬ ಊರು. ಅಲ್ಲಿ ಮೂರು ಜನ ಗೆಳತಿಯರು ಇರುತ್ತಾರೆ. ಊರಿನವರೆಲ್ಲರೂ ಸೇರಿ ಅರವಟ್ಟಿಗೆಯನ್ನು ಮಾಡುತ್ತಿರುತ್ತಾರೆ. ಆ ಸಮಯದಲ್ಲಿ ಮಳೆ ಬಂದುಬಿಡುತ್ತದೆ. ಆಗ ಒಬ್ಬ ಹುಡುಗಿ ಈಗ ಬರುವ ಮಳೆರಾಯ (ದೇವೇಂದ್ರ) ರಾತ್ರಿಗೆ ಬಂದರಾಗದೆ ಎಂದು ಹೇಳುತ್ತಾಳೆ. ಆ ಹುಡುಗಿ ಹೇಳಿದ ಹಾಗೆ ಮಳೆ ನಿಂತು ಹೋಗಿ ರಾತ್ರಿಗೆ ಮಳೆರಾಯ ಆ ಹುಡುಗಿಯ ಮನೆಗೆ ಬರುತ್ತಾನೆ. ಆಕೆ ಅವನ ಸಂಗಾತಕ್ಕೆ ಒಪ್ಪುವುದಿಲ್ಲ. ಮಾರನೆಗೆ ದೇವೇಂದ್ರ ಕಾಗೆಯ ಕೈಯಲ್ಲಿ ಒಡವೆಗಳನ್ನು ಕಳುಹಿಸಿಕೊಡುತ್ತಾನೆ. ದೇವೇಂದ್ರನ ಅಕ್ಕ ಕುರುಡು ಗುಂಬಾತಿಯು ಕಾಗೆಗೆ ಅಕ್ಕಿಯನ್ನು ಹಾಕಿ ಅವನ್ನೆಲ್ಲಾ ತೆಗೆದಿರಿಸಿಕೊಳ್ಳುತ್ತಾಳೆ. ಹುಡುಗಿ ನೋಡಲು ಬಂದ ದೇವೇಂದ್ರನ ಜೊತೆ ಆಕೆ ಮುನಿಸಿಕೊಳ್ಳುತ್ತಾಳೆ. ಮಾತನಾಡದ ಹುಡುಗಿಗೆ ದೇವೇಂದ್ರ ಹಲವಾರು ರೀತಿಯಾದ ತೊಂದರೆಗಳನ್ನು ನೀಡುತ್ತಾನೆ. ಗೂಳಿಯಾಗಿ, ಹುಂಜನಾಗಿ, ಕಾಲಿಗೆ ಮುಳ್ಳಾಗಿ, ಕೊನೆಗೆ ಬೆಳೆಗೆ ಬೇಕಾದ ಮಳೆಯಿಲ್ಲದೆ ಬರಗಾಲವನ್ನು ನೀಡುತ್ತಾನೆ. ಆಕೆ ಸೋಲುವುದಿಲ್ಲ ದೇವೇಂದ್ರ ತನ್ನ ಮನೆಗೆ ಆಳಾಗಿ ಕರೆಸಿಕೊಳ್ಳುತ್ತಾನೆ. ಅಲ್ಲಿ ಅವರ ನಡುವೆ ಪ್ರೇಮ ಆರಂಭವಾಗಿ ಆಕೆಗೆ ಮತ್ತು ದೇವೇಂದ್ರನಿಗೆ ಮದುವೆಯಾಗುತ್ತದೆ.

'ಅತ್ತೆ-ಸೊಸೆ' ಎಂಬ ಕಥೆಯಲ್ಲಿ ಒಂದು ಊರಿನಲ್ಲಿ ಅತ್ತೆ ಸೊಸೆಯರಿರುತ್ತಾರೆ. ಅತ್ತೆಯು ತುಂಬಾ ಕೆಟ್ಟವಳು. ಸೊಸೆಗೆ ಸರಿಯಾಗಿ ಊಟವನ್ನೇ ಕೊಡುತ್ತಿರಲಿಲ್ಲ. ಅತ್ತೆಯ ಹತ್ತಿರ ಬಂದ ಸೊಸೆ ನಿಮ್ಮ ಮಗನಿಗೆ ಹೊಲದ ಹತ್ತಿರ ತೊಂದರೆಯಾಗಿದೆಯೆಂದು ಹೇಳಿ ಕಳುಹಿಸಿಬಿಡುತ್ತಾಳೆ. ಇತ್ತ ಕಡೆ ಸೊಸೆಯು ದೋಸೆ ಮಾಡಿಕೊಂಡು ಬದನೆಕಾಯಿ ಪಲ್ಯ ಮಾಡಿ ತಿನ್ನುತ್ತಾಳೆ. ಅತ್ತೆಯು ಬಂದು ನೋಡಿ ತನ್ನ ಮಗನೊಂದಿಗೆ ಹೇಳಿ ಸೊಸೆಗೆ ಬೆಂಕಿ ಇಡುವಂತೆ ಮಾಡುತ್ತಾಳೆ. ಬೆಂಕಿ ಪೊಟ್ಟಣ ಮರೆತು ಬಂದಿರುವುದಾಗಿ ಮಗನು ಮನೆಗೆ ಹೋಗಲು ಇತ್ತ ಸೊಸೆಯು ಎದ್ದು ಓಡುತ್ತಾಳೆ. ಮಗನು ಬರಿ ಸೌದೆಗೆ ಬೆಂಕಿ ಇಡುತ್ತಾನೆ. ಸೊಸೆಯು ದಾರಿಯಲ್ಲಿ ಹೋಗುವ ಸಂದರ್ಭದಲ್ಲಿ ಕಳ್ಳರು ಕದ್ದ ಬಂಗಾರವನ್ನು ಹಂಚಿಕೊಳ್ಳುತಿರುತ್ತಾರೆ. ಇವಳನ್ನು ನೋಡಿದ ಕಳ್ಳರು ಈಕೆಗೂ ಬಂಗಾರವನ್ನು ಹಂಚುತ್ತಾರೆ. ಚಿನ್ನ ಪಡೆದ ಸೊಸೆ ಗಂಡನ ಮನೆಗೆ ಹಿಂತಿರುಗಿ, ಅತ್ತೆಗೆ ನೀವು ಬೆಂಕಿ ಇಡಿಸಿಕೊಳ್ಳಿ. ಆಗ ನಿಮಗೂ ಚಿನ್ನ ಸಿಗುತ್ತದೆ ಎಂದು ನಂಬಿಸಿ ಅತ್ತೆಗೆ ಬೆಂಕಿ ಇಡಿಸುತ್ತಾಳೆ. ಅತ್ತೆ ಸುಟ್ಟು ಹೋಗುತ್ತಾಳೆ. ಈ ಕಥೆಯಲ್ಲಿನ ಸಂಗತಿಗಳನ್ನು ಗಮನಿಸಿದಾಗ

ಜನಪದರು ಅಕ್ಷರಸ್ಥರಲ್ಲದಿದ್ದರೂ ನೀತಿವಂತರು. ಯಾರಿಗೂ ತೊಂದರೆ ಕೊಡಬಾರದು ಅದು ನಮಗೆ ತಿರುಗುಬಾಣವಾಗುವುದೆಂಬ ತತ್ವವನ್ನು ಇದರ ಮೂಲಕ ಕಟ್ಟಿಕೊಟ್ಟಿದ್ದಾರೆ. ಎಲ್ಲಾ ಕಥೆಗಳಲ್ಲಿ ಒಂದು ಮಹತ್ವದ ಆಶಯವೆಂದರೆ 'ನೀತಿ'. ಸಮಾಜಮುಖಿ ಚಿಂತನೆ. ಈ ಜನಪದ ಕಥೆಗಳನ್ನು ಕೇಳಿದಾಗಮುಂದಿನಪೀಳಿಗೆಗಳುಹೇಗೆಬದುಕಿನಲ್ಲಿನಡೆದುಕೊಳ್ಳಬೇಕೆಂಬ ಸದಾಶಯಗಳು ಇಲ್ಲಿ ಅಡಗಿವೆ.

ಒಟ್ಟಿನಲ್ಲಿ ಜನಪದ ಕಥೆಗಳಲ್ಲಿ ಮಹಿಳೆ ಪತಿವ್ರತೆ, ಪ್ರೇಮಮಯಿ, ಸುಂದರಿ, ಬಡವಿ, ರಾಣಿ, ಸತ್ಯವಂತೆ, ಬುದ್ಧಿವಂತೆ, ತಾಯಿ, ಅಕ್ಕ , ತಂಗಿ, ಮಗಳು, ಹೆಂಡತಿ, ಅತ್ತೆ, ಸೊಸೆ, ಸೇವಕಿ, ವೇಶ್ಯೆ, ಸುಳ್ಳುಗಾತಿ, ವಂಚಕಿ, ಛಲಗಾತಿ, ಸುಗುಣಿ, ದುಷ್ಟೆ ಇತ್ಯಾದಿ ಹಲವು ಒಳಿತು ಕೆಡಕುಗಳ ಬಗ್ಗೆ ಸಂಗಮವಾಗಿ ಕಂಡು ಬಂದಿದ್ದಾಳೆ. ಇಲ್ಲಿಯ ಮಹಿಳೆ ಕೇವಲ ಶೋಷಿತಳಾಗಿ ಚಿತ್ರಿತಳಾಗದೆ ಅಸ್ತಿತ್ವಕ್ಕಾಗಿ ಹೋರಾಡುವ ಹೋರಾಟಗಾರ್ತಿಯಾಗಿಯೂ ಮೂಡಿಬಂದಿದ್ದು, ಇಂಥ ಹೋರಾಟಕ್ಕೆ ಬೇಕಾದ ಶಕ್ತಿಯನ್ನು ಅವರು ಜೀವನ ಪ್ರೀತಿಯಿಂದ ಪಡೆದಿದ್ದಾರೆನ್ನಬಹುದು.

## ಪರಾಮರ್ಶನ ಗ್ರಂಥಗಳು:


1. ಪರಮಶಿವಯ್ಯ ಜಿ. ಶಂ. (1970). ಕನ್ನಡ ಜನಪದ ಕಥೆಗಳು. ಸಾಗರ ಪ್ರಕಾಶನ. ಬೆಂಗಳೂರು.
2. ರಮೇಶ್ ಸ. ಚಿ. (2011) ದಕ್ಷಿಣ ಭಾರತೀಯ ಜನಪದ ಕೋಶ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ.
3. ರಾಮಕೃಷ್ಣಯ್ಯ ಎಂ. (2021). ಪಡವಣಗೆರೆ ಗ್ರಾಮದ ಜನಪದ ಕಥೆಗಳು. ಎಸ್. ಎಲ್. ಎನ್. ಪ್ರಕಾಶನ. ಬೆಂಗಳೂರು.



**Funding:**
This study was not funded by any grant.

**Conflict of interest:**
The Authors have no conflict of interest to declare that they are relevant to the content of this article.



**About the License:**
© The Authors 2024. The text of this article is open access and licensed under a Creative Commons Attribution 4.0 International License.